ಬಂದಿದ್ದು ಆಕೆಯ ಒಳಗೆ ಮತ್ತೊಂದು ಜೀವ ಅಂಕುರವಾಗಿದೆ ಎನ್ನುವ ಅನುಮಾನ ಎಲ್ಲರಿಗೂ ಮೂಡಲಾರಂಭಿಸಿತು. ಡಾಕ್ಟರಿಗೆ ತೋರಿಸೋಣ ಅಂದರೆ ಅಹಲ್ಯಬಾಯಿಯವರಿಗೆ ಯಾವ ಡಾಕ್ಟರ್ ಮೇಲೂ ನಂಬಿಕೆ ಇರಲಿಲ್ಲ. ಹಾಗೂ ಹೀಗೂ ಅವರನ್ನ ಒಪ್ಪಿಸಿ ರಾಯರು ಗೈನಕಾಲಜಿಸ್ಟ್ ಹತ್ತಿರ ಕರಕೊಂಡು ಹೋದರೆ ಅಲ್ಲಿಯವರೆಗೂ ಬಂದ ಅಹಲ್ಯಬಾಯಿ ಕಡೆಗೆ ಯಾವ ಟೆಸ್ಟ್ ಮಾಡಿಸಿಕೊಳ್ಳಕ್ಕೂ ಒಪ್ಪಲಿಲ್ಲ. ಕಡೇಗೆ ಆ ಡಾಕ್ಟರು 'ಹೋಗಲಿ ಬಿಡಿ, ವಿಸಿಬಲ್ ಸೈನ್ಸ್ ಅಂತೂ ಇದೆ, ಆದರೆ ಏನೂ ಕನ್‌ಫರ್ಮ್ ಮಾಡೋದಕ್ಕೆ ಮುಂಚೆ ಟೆಸ್ಟ್‌ಗಳನ್ನು ಮಾಡಬೇಕಾಗತ್ತೆ' ಅಂದರು. ಹಾಗೂ 'ಸ್ವಲ್ಪ ಸರಿಯಾಗಿ ನೋಡಿಕೊಳ್ಳಿ ಈ ಸಮಯದಲ್ಲಿ ಸೈಕಲಾಜಿಕಲ್ ಪ್ರೆಶರ್ರು ಜಾಸ್ತಿ ಇರತ್ತೆ' ಅಂದು ಕಡೇಗೆ 'ಅದ್ಯಾಕೆ ಅವರು ಪದೇ ಪದೇ ಕೂದಲು ಕಿತ್ತಾಕೋ ತರಹ ಕಾಣತ್ತಲ್ಲ' ಅಂತ ರಾಯರನ್ನೇ ಪ್ರಶ್ನಿಸಿದರು. ಮನೇಗೆ ವಾಪಸಾದ ಮೇಲೆ ಅಹಲ್ಯಬಾಯಿ ಆ ಡಾಕ್ಟರಿಗೆ 'ಬೋಳಿಮುಂಡೆ, ಕಳ್ಳಮುಂಡೆ' ಅಂತ ಸಹಸ್ರನಾಮಾರ್ಚನೆ ಮಾಡಿದ್ದೂ ಸಾಲದಂತೆ 'ನಾಕು ದಿನ ಅಮ್ಮನ ಮನೆಗೆ ಹೋಗಿ ಬರ್ತೀನಿ' ಅಂತ ಅದೇ ಡ್ರೆಸ್ಸಿನಲ್ಲೇ ಬರಬರ ಅಂತ ರಾಯರು 'ತಾಳೇ, ತಾಳೇ' ಅನ್ನುತ್ತಿದ್ದರೂ ಕೇಳದೇ ಆಟೊ ಹತ್ತಿ ಹೊರಟುಬಿಟ್ಟರು.

ರಾಯರಿಗೂ ಈ ಸಹವಾಸ ಸಾಕು ಸಾಕಾಗಿ ಬಿಟ್ಟು 'ಶ್ರೀರಾಮ' ಅಂದುಕೊಂಡರು. ಸದ್ಯ, ಇವತ್ತು ಭಾನುವಾರ ಸ್ವಲ್ಪ ಹೊತ್ತಾದರೂ ಆರಾಮಾಗಿ ಇರಬಹುದು ಅಂತ ಹಾಗೇ ಹಾಲಿನ ಕುರ್ಚಿಯ ಮೇಲೆ ಕೂತು ಸುಸ್ತಾಗಿ ಕಣ್ಣುಮುಚ್ಚಿ ಹಾಗೇ ನಿದ್ದೆ ಹೋದರು. ಇನ್ನೇನು ಗಾಢವಾದ ನಿದ್ದೆಗೆ ಜಾರಬೇಕು ಅನ್ನೋ ಅಷ್ಟರಲ್ಲಿ ಯಾರೋ ದಡಬಡ ಬಾಗಿಲು ತಟ್ಟಿದ ಹಾಗಾಯಿತು. ಅಪರೂಪದ ಶಾಂತ ನಿದ್ದೆಯಿಂದ ರಾಯರು ಬೆಚ್ಚಿಬಿದ್ದು ಎದ್ದು ಬಾಗಿಲು ತೆರೆದರೆ, ಅರೇ ಅಹಲ್ಯಬಾಯಿ! ರಾಯರು 'ಏನೊ, ಎಂತೊ' ಅನ್ನೋದಕ್ಕೂ ಮುಂಚೆ 'ಹಾಳಾಗಿ ಹೋಗಲಿ, ಮುಂಡೆ ಅಂತ ಚೆನ್ನಾಗಿ ನಿದ್ದೆಮಾಡಿಬಿಟ್ಟೆನೋ' ಅಂತ ಶಾಪ ಹಾಕುತ್ತಲೇ ಮನೆ ಒಳಗೆ ಬರುತ್ತ 'ಮೊದಲು ಆಟೊದವನಿಗೆ ದುಡ್ಡುಕೊಟ್ಟು ಕಳಿಸು' ಅಂತಲೂ ಅಟ್ಟಿದರು. ರಾಯರಿಗೂ ಡಾಕ್ಟರು 'ಈ ಟೈಮಲ್ಲಿ ತುಂಬ ಪ್ರೆಶರ್ರಿರತ್ತೆ, ಹುಷಾರಾಗಿ ಡೀಲ್ ಮಾಡಬೇಕು. ಹೈ ಬಿ.ಪಿನೂ ಬಹಳ ಕಾಮನ್ನು' ಅಂತೆಲ್ಲ ವಾರ್ನಿಂಗ್ ಕೊಟ್ಟಿದ್ದು ನೆನಪಾಗಿ 'ಏನಕ್ಕೂ ಹುಷಾರಾಗಿರೋದೆ ವಾಸಿ' ಅಂತ ಕಾಫಿ ಮಾಡಿ ಆಕೆಗೂ ಕೊಟ್ಟು ತಾವೂ ಕುಡಿದರು.

ಇದಾದ ಮೇಲೆ ಶುರುವಾಯಿತಲ್ಲ ಹೊಸ ಅಧ್ಯಾಯ! ಅಹಲ್ಯಬಾಯಿಯವರಿಗೆ ಏನು ತಿಂದರೂ ವಾಂತಿ, ವಮನ. ಮೊದಲೇ ಸಣ್ಣ, ವಾಂತಿ ಆಗಿ ಆಗಿ ಒಳ್ಳೇ ಕಡ್ಡೀ ತರಹ ಆಗಿದ್ದು ಆಕೆ ಹೊಟ್ಟೆ ಮಾತ್ರ ದೊಡ್ಡದಾಗಿ ಕಾಣಲು ಪ್ರಾರಂಭವಾಗಿದ್ದು ದೂರದಿಂದ ನೋಡಿದರೆ ಇಥಿಯೋಪಿಯಾದ ರೆಫ್ಯೂಜೀ ತರಹ ಕಾಣುತ್ತಿದ್ದರು. ಆದರೆ ಏನೇ ಆದರೂ ಡಾಕ್ಟರಿಗೆ ತೋರಿಸಿಕೊಳ್ಳಕ್ಕೆ ಒಪ್ಪುತ್ತಿರಲಿಲ್ಲ. ಹೆಚ್ಚು ಒತ್ತಾಯಮಾಡಿದರೆ ಕೂದಲನ್ನೆಲ್ಲ ಕಿತ್ತುಕೊಂಡು, ತಲೆ ಚಚ್ಚಿಕೊಳ್ಳುವುದು, ಕೂದಲನ್ನ ಬಾಯಿಗೆ ತುರುಕಿಕೊಳ್ಳುವುದು ಹೀಗೇ ಆಯಿತು ಅವರ ವರ್ತನೆ.

ತಿಂಗಳುಗಳಾದರೂ ಅಹಲ್ಯಬಾಯಿಯವರಿಗೆ ವಮನ ಕಮ್ಮಿಯೂ ಆಗಲಿಲ್ಲ. ಏನು ತಿಂದರೂ ವಾಂತಿ, ವಾಂತಿ. ಕಡೇಗೆ ಶ್ರೀನಿವಾಸರಾಯರು ದುಂಬಾಲು ಬಿದ್ದು ಅವರ ತಾಯಿಯನ್ನ ಮನೆಗೆ ಕರೆಸಿಕೊಂಡರು. ಆದರೆ ಅವರು ಮನೆಗೆ ಬಂದ ಮಾರನೆಯ ದಿನ